**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ.**

ಫಿರ್ಯಾದುದಾರರು : ಸರ್ಕಾರದ ಪರವಾಗಿ
ಮಹಾಲಿಂಗಪೂರ ಪೋಲಿಸ ಠಾಣೆ

ಆರೋಪಿ : ಪ್ರಣಯ ತಂಃ ಯುವರಾಜ ಕಾಂಬ್ಳೆ,
ವಯಾಃ 28 ವರ್ಷ, ಉಃ ಬ್ಯಾಂಕ ನೌಕರ,
ವಾಸಃ ಗುಗುಸ್ ಮಾತಾರಾದೇವಿ, ಚಂದ್ರಪುರ,
ತಾಃ ಚಂದ್ರಪುರ, ರಾಜ್ಯಃ ಮಹಾರಾಷ್ಟ್ರ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ಅಡಿಯಲ್ಲಿ ಆರೋಪಿತನ ಹೇಳಿಕೆ

ಪ್ರಶ್ನೆ - 1) ಅಭಿಯೋಜನೆ ಪರ ಕೊಟ್ಟಂತಹ ಸಾಕ್ಷ್ಯಗಳು ಕೇಳಿದ್ದೀರಾ?

ಉತ್ತರ - ಕೇಳಿಯಿತು

ಪ್ರಶ್ನೆ - 2) ಅಸಾ-1 ಸುಮಿತ್ರಾ ತಂಃ ನಾಗಪ್ಪ ತೇಗೂರ, ಇವರು ತಮ್ಮ ಸಾಕ್ಷಿಯಲ್ಲಿ, ದಿಃ 23-10-2021 ರಂದು ಸಂಜೆ 4-45 ಗಂಟೆ ಸಮಾರಿಗೆ ನಾನು, ನನ್ನ 3 ತಿಂಗಳ ಕೂಸು, ನನ್ನ ಅಣ್ಣಾ ಮಹಾನಿಂಗ, ನನ್ನ ತಾಯಿ ಶಾಂತವ್ವ ಕೂಡಿಕೊಂಡು ನನ್ನ ತವರು ಢವಳೇಶ್ವರದಿಂದ ನನ್ನ ಗಂಡನ ಮನೆ ಪಾಲಭಾವಿಗೆ ನಮ್ಮ ಮೊಟಾರ್ ಸೈಕಲ ಮೇಲೆ ಬರುತ್ತಿದ್ದು, ನಾವು ಕೆಸರಗೊಪ್ಪ ಹತ್ತಿರ ನಿಧಾನವಾಗಿ ಬರುತ್ತಿದ್ದಾಗ ಗೋಕಾಕದಿಂದ ಪ್ರವೀಣ ಎಂಬಾತ ತನ್ನ ಕಾರನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ನಿಧನವಾಗಿ ಚಲುಸುತ್ತಿದ್ದ ನಮ್ಮ ಮೊಟಾರ್ ಸೈಕಲಗೆ ಎದುರಿನಿಂದ ಹಾಯಿಸಿ ಅಪಘಾತ ಪಡಿಸಿದ್ದು, ಅದರಿಂದ ನಾವೆಲ್ಲರೂ ಬಿದ್ದಿದ್ದು, ಸದರಿ ಅಪಘಾದಲ್ಲಿ ನನ್ನ ತಾಯಿಯ ಬಲಗಾಲಿನ ಮೇಲೆ ಕಾರು ಹಾಯಿದು ಗಾಯವಾಗಿದ್ದು, ಮಹಾನಿಂಗ ಈತನ ಕೈಯಿಗೆ ತೆರಚಿದ ಗಾಯವಾಗಿದ್ದು, ಅಲ್ಲಿ ಜನ ಕೂಡಿದ್ದು ಅವರು ನಮ್ಮನ್ನು ಕನಕರೆಡ್ಡಿ ಆಸ್ಪತ್ರೆಗೆ ದಾಖಲಿಸಿದ್ದು, ನಮಗೆ ಅಪಘಾತ ಪಡಿಸಿದ ಕಾರಿನ ನಂ. ಎಂ ಹೆಚ್ 31/ಡಿಕೆ 8837 ಇದ್ದು, ಸದರಿ ಅಪಘಾತವು ಕಾರು ಚಾಲಕನ ತಪ್ಪಿನಿಂದ ಆಗಿದ್ದು, ನಾವು ಆರೋಪಿತನ ಮೇಲೆ ದೂರು ಸಲ್ಲಿಸಿರುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ - ಸುಳ್ಳು

ಪ್ರಶ್ನೆ - 3) ಅಸಾ-3 ಶಾಂತವ್ವ ಗಂಃ ಬಸಪ್ಪ ಹುದ್ದಾರ, ಇವರು ತಮ್ಮ ಸಾಕ್ಷಿಯಲ್ಲಿ, ಸುಮಾರು 3 ವರ್ಷಗಳ ಹಿಂದೆ ನಾನು ನನ್ನ ಮಗಳನ್ನು ಬಾಣಂತನ ಮುಗಿಸಿ ಆಕೆಯ ಗಂಡನ ಮನೆಗೆ ಢವಳೇಶ್ವರದಿಂದ ನಾನು, ಚಾಸಾ-1 ಮತ್ತು ಆಕೆಯ 3 ತಿಂಗಳ ಮಗು ಮತ್ತು ನನ್ನ ಮಗನಾದ ಚಾಸಾ-5 ರವರು ನನ್ನ ಅಣ್ಣನಾದ ಚಾಸಾ-8 ರವರ ಮೋಟಾರ್ ಬೈಕ್ ಮೇಲೆ ಪಾಲಬಾವಿಗೆ ಕೇಸರಗೊಪ್ಪ ರಸ್ತೆಯಲ್ಲಿ ಹೋಗುತ್ತಿದ್ದಾಗ, ಕೊಲ್ಲಾಪೂರ ರಸ್ತೆಯಿಂದ ಬರುತ್ತಿದ್ದ ಒಂದು ಕಾರ್ ಗಾಡಿ ಅತೀ ವೇಗವಾಗಿ ಬಂದು ನಾವು ಹೋಗುತ್ತಿದ್ದ ಮೋಟಾರ್ ಬೈಕಗೆ ಹಾಯಿಸಿ ಅಪಘಾತಪಡಿಸಿದ್ದು, ಆಗ

22/2/25

ಸಂಜೆ ಆಗಿದ್ದು, ಆಗ ನನ್ನ ಎಡಗಾಲಿಗೆ ತೀವ್ರ ಗಾಯವಾಗಿದ್ದು, ಅಪಘಾತದಲ್ಲಿ ನನಗೆ ಮತ್ತು ನನ್ನ ಮಗನಿಗೆ ಪೆಟ್ಟಾಗಿದ್ದು, ನಂತರ ಚಾಸಾ-6 ಮತ್ತು 7 ರವರು ಅಲ್ಲಿಗೆ ಬಂದು ನಮ್ಮನ್ನು ಮಹಾಲಿಂಗಪೂರದ ಕನಕರೆಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ನನ್ನ ಮಗಳಾದ ಚಾಸಾ-1 ರವರು ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ - ಸುಳ್ಳು

ಪ್ರಶ್ನೆ - 4) ಅಸಾ-4 ಮಾಲಿಂಗ ತಂಃ ಬಸಪ್ಪ ಹುದ್ದಾರ, ಇವರು ತಮ್ಮ ಸಾಕ್ಷಿಯಲ್ಲಿ, ದಿನಾಂಕಃ23-10-2021 ರಂದು ಸಂಜೆ 4-30 ಗಂಟೆಗೆ ನಾನು, ನನ್ನ ತಾಯಿ ಮತ್ತು ತಂಗಿ ಮತ್ತು ಆಕೆಯ 3 ತಿಂಗಳ ಮಗು ಢವಳೇಶ್ವರದಿಂದ ಪಾಲಬಾವಿಗೆ ಚಾಸಾ-8 ರವರ ಮೋಟಾರ್ ಬೈಕ್ ನಂ.ಕೆಎ-23 ಇಎಸ್-0729 ಇದರ ಮೇಲೆ ಹೋಗುತ್ತಿದ್ದಾಗ, ಕೇಸರಗೊಪ್ಪ ಕ್ರಾಸ್ ಹತ್ತಿರ ನಮ್ಮ ಸೈಡಾದ ಎಡಗಡೆ ಹೋಗುತ್ತಿದ್ದಾಗ, ಗೋಕಾಕ ಕಡೆಯಿಂದ ಒಂದು ಕಾರ್ ಗಾಡಿ ಅತೀ ವೇಗವಾಗಿ ಬಂದು ನಾನು ಚಲಾಯಿಸುತ್ತಿದ್ದ ಮೋಟಾರ್ ಬೈಕಗೆ ಹಾಯಿಸಿ ಅಪಘಾತಪಡಿಸಿದ್ದು, ಆಗ ನಾವೆಲ್ಲರೂ ಮೋಟಾರ ಬೈಕನಿಂದ ಕೆಳಗೆ ಬಿದ್ದಿದ್ದು, ನನ್ನ ತಾಯಿಯ ಎಡಗಾಲಿಗೆ ತೀವ್ರ ಗಾಯವಾಗಿದ್ದು, ನನಗೆ ತೆರಚಿದ ಗಾಯವಾದ್ದು, ಆಗ ಸಮಯ 04-30 ಆಗಿದ್ದು, ನಂತರ ಅಲ್ಲಿಗೆ ಚಾಸಾ-6 ಮತ್ತು 7 ರವರು ಬಂದು ಚಾಸಾ-6 ರವರು ನಮ್ಮನ್ನು ಕನಕರೆಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ನನ್ನ ತಂಗಿಯಾದ ಚಾಸಾ-1 ಪೋಲಿಸರಿಗೆ ದೂರು ಸಲ್ಲಿಸಿದ್ದು, ಈ ಕುರಿತು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ - ಸುಳ್ಳು

ಪ್ರಶ್ನೆ - 5) ಅಸಾ-5 ಸುರೇಶ ತಂಃ ಬಸಪ್ಪ ಹಿಪ್ಪರಗಿ, ಇವರು ತಮ್ಮ ಸಾಕ್ಷಿಯಲ್ಲಿ, ಸುಮಾರು 03 ವರ್ಷಗಳ ಹಿಂದೆ ನಾನು ಚಾಸಾ-7 ರವರು ಕೂಡಿ ಸೈದಾಪೂರಕ್ಕೆ ಹೋಗುತ್ತಿದ್ದಾಗ ಮಹಾಲಿಂಗಪೂರದ ಕೆಸರಗೊಪ್ಪ ಕ್ರಾಸ ಹತ್ತಿರ ಚಾಸಾ- 5 ರವರು ಚಾಸಾ-4 ಮತ್ತು 1 ರವರನ್ನು ಮೋಟಾರ ಸೈಕಲ ಮೇಲೆ ಕೂಡ್ರಿಸಿಕೊಂಡು ಹೋಗುತ್ತಿದ್ದು, ಅವರು ರಸ್ತೆ ತಿರುವಿನಲ್ಲಿ ದಾಟಲು ಕೈ ಮಾಡಿ ಹೋಗುತ್ತಿದ್ದಾಗ ಗೋಕಾಕ ಕಡೆಯಿಂದ ಒಂದು ಬಿಳಿ ಕಾರ ಜೊರಾಗಿ ಬಂದು ಸದರಿಯವರ ಮೋಟಾರ ಸೈಕಲಕ್ಕೆ ಡಿಕ್ಕಿ ಪಡಿಸಿದ್ದು, ಆಗ ಚಾಸಾ-4 ರವರ ಕಾಲಿಗೆ ರಕ್ತ ಗಾಯವಾಗಿದ್ದು, ಸದರಿ ಕಾರಿನ ನಂಬರ ಎಂ ಎಚ್ 31-ಬಿಕೆ 8837 ಅಂತಾ ಇದ್ದು, ನಂತರ ನಾನು ಮತ್ತು ಚಾಸಾ-7 ರವರು ಕೂಡಿ ಚಾಸಾ-4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ನಾನು ದೂರನ್ನು ಬರೆದು ದಸ್ತೂರ ಅಂತಾ ಸಹಿ ಮಾಡಿದ್ದು, ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ - ಸುಳ್ಳು

ಪ್ರಶ್ನೆ - 6) ಅಸಾ-6 ಸಿದ್ದಪ್ಪ ತಂಃ ಬಲವಂತಪ್ಪ ಹಿರೇಕುರುಬರ, ಎ ಎಸ್ ಐ, ಮಹಾಲಿಂಗಪೂರ ಪೋಲಿಸ್ ಠಾಣೆ, ಇವರು ತಮ್ಮ ಸಾಕ್ಷಿಯಲ್ಲಿ, ದಿಃ 23-10-2021 ರಂದು ನಾನು ಠಾಣೆ ಕರ್ತವ್ಯದಲ್ಲಿ

22/2/25

ಇದ್ದಾಗ ರಾತ್ರಿ 08-45 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ನಮ್ಮ ಠಾಣಾ ಗುನ್ನೆ ನಂಬರ 107/2021 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ ವ ವ ವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿದ್ದು, ದಿನಾಂಕ 24-10-2021 ರಂದು ಚಾಸಾ-6 ರವರು ತೋರಿಸಿದ ಸ್ಥಳದಲ್ಲಿ ಚಾಸಾ- 2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆವನ್ನು ಬೆಳಿಗ್ಗೆ 09-00 ರಿಂದ 10-00 ಗಂಟೆ ವರೆಗೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಪೋಟೋಗಳನ್ನು ತೆಗೆಸಿದ್ದು, ನಂತರ ಅದೇ ದಿನ ಬೆಳಿಗ್ಗೆ 10-30 ರಿಂದ 11-30 ರ ವರೆಗೆ ಮಹಾಲಿಂಗಪೂರ ಪೋಲಿಸ ಠಾಣಾ ಆವರಣದಲ್ಲಿ ಅಪಘಾತ ಪಡಿಸಿದ ಎರಡೂ ವಾಹನಗಳನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ವಾಹನ ತಡೆ ಪಂಚನಾಮೆಯನ್ನು ಮಾಡಿದ್ದು, ಅದೇ ದಿನ ಸಾಕ್ಷಿದಾರರಾದ ಚಾಸಾ- 4 ರಿಂದ ಚಾಸಾ- 8 ರವರ ಹೇಳಿಕೆಗಳನ್ನು ಪಡೆದಿದ್ದು, ನಂತರ ಅಪಘಾತ ಪಡಿಸಿದ ವಾಹನಗಳ ಯಾಂತ್ರೀಕ ಪರೀಕ್ಷೆ ಕುರಿತು ಚಾಸಾ-9 ರವರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿದ್ದು, ಅಪಘಾತ ಪಡಿಸಿದ ವಾಹನಗಳ ಆರ್ ಸಿ ಮಾಲೀಕರಿಗೆ ಮೋಟಾರ ವಾಹನ ಕಾಯಿದೆ ಕಲಂ 133 ಅಡಿಯಲ್ಲಿ ನೋಟಿಸ ಜಾರಿ ಮಾಡಿ ಹಿಂಬರಹವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದು, ನಂತರ 1 ನೇ ಆರೋಪಿ ಠಾಣೆಗೆ ಹಾಜರಾಗಿದ್ದು ಅತನನ್ನು ವಿಚಾರಣೆ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು, ದಿನಾಂಕ 25-10-2021 ರಂದು ಆತನಿಂದ ಸೂಕ್ತ ಮುಚ್ಚಳಿಕೆ ಪತ್ರ ಪಡೆದುಕೊಂಡು ವಾಹನವನ್ನು ಬಿಡುಗಡೆ ಮಾಡಿ ಪೋಟೋಗಳನ್ನು ತೆಗೆಸಿದ್ದು, ದಿನಾಂಕ 27-11-2021 ರಂದು ಚಾಸಾ-9 ರವರಿಂದ ವಾಹನದ ಪರೀಕ್ಷಾ ವರದಿ ಬಂದಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದು, ಅದೇ ದಿನ ಚಾಸಾ-10 ರವರಿಂದ ಚಾಸಾ-4 ರವರ ಗಾಯದ ಪ್ರಮಾಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದು, ನಂತರ ತನಿಖೆ ಪೂರ್ಣಗೊಂಡಿದ್ದು ಆರೋಪಿಯ ಮೇಲೆ ಆರೋಪ ಸಾಬಿತಾಗುವದು ಕಂಡು ಬಂದಿದ್ದರಿಂದ ದಿನಾಂಕ 27-11-2021 ರಂದು ಅತನ ಮೇಲೆ ಅಂತಿಮ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ - ಸುಳ್ಳು

ಪ್ರಶ್ನೆ -7) ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಮಾಡಿಸುವುದು ಇದೆಯಾ ?

ಉತ್ತರ - ಇರುವುದಿಲ್ಲ

ಪ್ರಶ್ನೆ-8) ನಿಮ್ಮ ಪರವಾಗಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರ - ಏನೂ ಇಲ್ಲ

22/2/25

ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ [ಅಂದರೆ ಆಂಗ್ಲ ಭಾಷೆಯಲ್ಲಿ] ಓದಿ ಹೇಳಿ ಅವರು ತಿಳಿದುಕೊಂಡು ಕೊಟ್ಟ ಉತ್ತರವನ್ನು [ಕನ್ನಡ ಭಾಷೆಯಲ್ಲಿ] ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

ಸ್ಥಳಃ ಬನಹಟ್ಟಿ
ದಿನಾಂಕಃ 22/2/25

22/2/25
ಪ್ರ. ದ. ನ್ಯಾ.. ದಂಡಾಧಿಕಾರಿಗಳು,
ಬನಹಟ್ಟಿ .